# ಜಯವದೆ ಜಯವದೆ ಮನೆತನಕೆ

### ಜೋಗಿ ಪದ

### ಬುಡಬುಡಿಕೆ ಹಾಡು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** The lyrics mentioned without highlights are as per Ref. 1. The lyrics given in yellow highlights are as per Ref. 2. There is one more version in Ref. 1, which are given in green highlights. These wordings given in green highlights are followed by the singer. All are slightly different. Hence, they are given separately.
4. **Note:** Unable to upload the song as it is not available in YouTube. Viewers can listen to the song through the audio file given below: https://soundcloud.com/shriharivayu-gurugalu/jayavade-jayavade-smt

ರಾಗ: ಪಕ್ಷಿ ಶಕುನ ತಾಳ: ಏಕ

ಜಯವದೆ ಜಯವದೆ, ಈ ಮನೆತನಕೆ
ಬಹಳ ಜಯವದೆ || ಪ ||

ಹಕ್ಕಿ ನುಡಿಯಿತಣ್ಣ ನುಡಿಯಿತು
ಹಕ್ಕಿ ನುಡಿಯಿತು
ಒಂದು ಶುಭ ವಚನ
ಹಕ್ಕಿ ನುಡಿಯಿತು ಒಂದೆರಡಕ್ಷರ
ಎರಡು ಮೂವತ್ತೆರಡಾಗಿ ನುಡಿಯಿತು
ವಾಲ್ಮೀಕನ ಉದ್ಧರಿಸಿತು
ಹಕ್ಕಿ ಶಕುನವು
ಮುಕ್ಕಣ್ಣಗೆ ಜಯವಾಯಿತು
ಪಾರ್ವತಿಗೆ ಮಾಂಗಲ್ಯವಾಯಿತು
ಈರೇಳು ಜಗದೊಳಗೆ ಮೆಚ್ಚಿ ಪೆಸರುಳಿಸಿತಣ್ಣ
ಉಳಿಸಿತು
ಆ ನುಡಿ ಅಮೃತದ ನುಡಿ
ಹನುಮಂತ ದೇವರಿಗೆ ವಜ್ರಕಾಯವ ಮಾಡಿತು

ಅಂಬುಧಿಯ ಹಾರಿ ಲಂಕೆಯ ಸುಟ್ಟು ರಕ್ಕಸರ ಮಡುಹಿ
ಸತ್ಯಲೋಕದ ಪದವಿಯನಿತ್ತು ಸಲಹಿತಣ್ಣ
ಸಲಹಿತು
ವಿಭೀಷಣನ ಚಿರಂಜೀವಿಯನೆ ಮಾಡಿತು
ಲಂಕೆಗೆ ಭೂಪತಿಯನೆ ಮಾಡಿತು
ಅಂಜದಿರಣ್ಣಾ
ಅಂಜದಿರಯ್ಯ ಅಂಜದಿರು
ಮೆಚ್ಚದಿರಯ್ಯಾ ಮೆಚ್ಚದಿರು
ಮೆಚ್ಚದಿರಣ್ಣಾ ಮೆಚ್ಚದಿರು ॥ 1 ॥

ಗಜಪುರವೆಂಬೋ ಪಟ್ಟಣದೊಳಗೆ
ಶ್ರೀ ಶುಕನೆಂಬೋ ಪಕ್ಷಿ ನುಡಿಯಲಾಗಿ
ಪರೀಕ್ಷಿತನೆಂಬವ ಶಕುನವ ಕೇಳಿ
ಇಂದ್ರಿಯಗಳನೆ ನಿಗ್ರಹಿಸಿ ಏಕಾಗ್ರ ಚಿತ್ತದಲಿ ಬಂಧಿಸಿ
ಅರಿಷಡ್ವರ್ಗಗಳನ್ನೆ ತರಿದು
ಹಿಂದಿನ ಹಕ್ಕಿ ಶಕುನದ
ಫಲಗಳನುಂಡವರ ಮಾತು ಕೇಳಿದರಣ್ಣಾ
ಕೇಳಿದರು
ಅವರ್ಯಾರು ಎಂದರೆ
ಅಂಬರೀಷರಾಯ
ಪಶು ಯೋನಿಗೆ ಬಂದ ಗಜರಾಯ
ಶಿಶುವಾಗಿದ್ದ ಧ್ರುವ, ಪ್ರಹ್ಲಾದ, ಉದ್ಧವ, ಅಜಾಮಿಳ
ಇವರನೇಕರಿಗೆ ಫಲವಾಯಿತಣ್ಣಾ ಫಲವಾಯಿತು
ಅಂಜದಿರಣ್ಣಾ ಅಂಜದಿರು
ಅಂಜದಿರಯ್ಯ ಅಂಜದಿರು
ಮೆಚ್ಚದಿರಯ್ಯಾ ಮೆಚ್ಚದಿರು
ಮೆಚದಿರಣ್ಣಾ ಮೆಚ್ಚದಿರು ॥ 2 ॥

ಈ ಸಂಸಾರವೆಂಬೋ ಮರ್ಕಟ ನಾಟಕವಾ
ಮೆಚ್ಚದಿರು
ಉಚ್ಚೆ ಬಚ್ಚಲು ಎಂಬೊ ಕುಕ್ಷಿಯಲಿ ಪುಟ್ಟಿ
ಎಂಭತ್ತನಾಲ್ಕು ಲಕ್ಷ ಯೋನಿಗಳಲ್ಲಿ
ಪುಟ್ಟಿ ಪುಟ್ಟಿ ಎಲುವಿನ ಪಂಜರ
ನರಗಳ ಬಿಗುವು ತೊಗಲಿನ ಹೊದ್ದಿಕೆ
ರೋಮಗಳ ಕಸ

ಮಧ್ಯ ಮಾಂಸಗಳ ಭಿತ್ತಿ

ನವದ್ವಾರಗಳಿಂದ ಜನಿಸಿದ

ದುರ್ಗಂಧ ಶರೀರವ ಮೆಚ್ಚದಿರು

ಬಿಡು ಬಿಡು ಕಾಮವ ಬಿಡು

ಕ್ರೋಧವ ಬಿಡು, ಲೋಭವ ಬಿಡು

ಮೋಹವ ಬಿಡು, ಮದ ಮತ್ಸರಹಂಕಾರವ ಬಿಡು

ನೋಡು ನೋಡು ನಿನ್ನೊಳಗೆ

ನೀನೇ ತಿಳಿದು ನೋಡು

ಮನವ ನರಹರಿಯ ಚರಣಕ್ಕೆ ಸಮರ್ಪಣೆಯ ಮಾಡು

ಬೇಡು ಬೇಡು

ಆತನ ಚರಣವ ಬಿಡದಿರು

ಹರಿದಾಸರ ಸಂಗವ ಬಿಡದಿರು

ಎನ್ನ ಶಕುನದಲಿ ವಿಶ್ವಾಸವ ಬಿಡದಿರು

ಇದೇ ಮುಕುತಿ ಪಥಕೆ ಪಥ

ಶ್ರೀ ಪುರಂದರ ವಿಠಲನ್ನ ನಾಮ ಸಂಕೀರ್ತನೆಯ ಬಿಡದಿರು || 3 ||

**Note:** Please refer note: 3 above. The lyrics given in yellow highlights are as per Ref. 2. The wordings given in green highlights are as per singer and also as per Ref. 1.

ಜಯವದೆ ಜಯವದೆ ಈ ಮನೆತನಕೆ

ಭಯವಿಲ್ಲ ಎಂದೆಂದಿಗು ನಿಜವು

ಬಿಡು ಬಿಡು ಬಿಡು ಬಿಡು ಮನಸಂಶಯವ

ಶುಕನೆಂಬ್ವಕ್ಕಿ ಹೇಳುತದಪ್ಪ

ಜಗವೆಂಬಾ ಗಿಡ ಹುಟ್ಟೀತಣ್ಣ

ಹಕ್ಕಿಗಳೆರಡು ಕೂಡ್ಯೆದಾವೆ

ಹಣ್ಣುಗಳೆರಡು ಐದಾವಪ್ಪ

ಮೂರು ಮೂರು ಗುಣ ಕೇಳಣ್ಣ

ಹಣ್ಣಿನೊಳಗೆ ನಾಲ್ಕು ರಸವಪ್ಪ

ಐದು ದೊಡ್ಡ ಗರಿ ಕಾಣಣ್ಣ

ಆರು ಬಗೆಯ ಸ್ವರೂಪ ಕೇಳು

ಏಳು ಬಗೆಯ ಕೆಂಗಲು ಬಣ್ಣ

ಸಣ್ಣ ಗರಿಗಳು ಎಂಟೈದಾವೆ

ಅಕ್ಷವು ಅದಕೆ ಒಂಭತ್ತೈತೆ

ಎಲೆಗಳು ಹತ್ತು ಐದಾವಪ್ಪ

ಜಯವದೆ ಜಯವದೆ ಈ ಮನೆತನಕೆ

ಬಿಡು ಬಿಡು ಬಿಡು ಬಿಡು ಮನಸಂಶಯವ

ಶುಕನೆಂಬ್ವಕ್ಕಿ ಹೇಳುತದಪ್ಪ

ಜಗವೆಂಬೊ ಗಿಡ ಹುಟ್ಟ್ಯೈತಣ್ಣ

ಹಣ್ಣುಗಳೆರಡೂ ಐದಾವಪ್ಪ

ಮೂರು ಬುಡದ ಗಿಡ ಕೇಳಣ್ಣ

ಹಣ್ಣಿನೊಳಗೆ ನಾಲ್ಕು ರಸವು

ಐದು ದೊಡ್ಡ ಹರೆ ಕಾಣಪ್ಪ

ಆರು ಬಗೆಯ ಸ್ವರೂಪ ಕೇಳು

ಏಳು ಬಗೆಯ ತೊಗಟುಂಟಣ್ಣ

ಸಣ್ಣ ಗರಿಗಳು ಎಂಟೈದಾವೆ

ಅಕ್ಷವು ಇದಕೆ ಒಂಭತ್ತೈತೆ

ಎಲೆಗಳು ಹತ್ತು ಐದಾವಪ್ಪ

ಒಂದೇ ಹಕ್ಕಿ ಹಣ್ ತಿಂತೈತೆ
ಮತ್ತೊಂದ್ಹಕ್ಕಿ ನೋಡುತದಪ್ಪ
ಹಣ್ ತಿಂದ್ಹಕ್ಕಿ ಬಡವಾಗೈತೆ
ತಿನ್ನದ ಹಕ್ಕಿ ಬಲವಾಗೈತೆ
ಒಂದೇ ಕುಲವೆಂದ್ತಿಳಿಯಲುಬೇಡ
ತಿಳಿದರೆ ನಿನಗೆ ಕೇಡಾದೀತು

ದಾಸ ತತ್ವದ ಆದಿ ಕಾಣಣ್ಣ
ಹಳೇ ವಸ್ತ್ರವ ಬಿಸಾಡಣ್ಣ
ಹೊಸ ವಸ್ತ್ರ ನಿಮಗೆ ದೇವರ್ ಕೊಟ್ಟಾನು
ಹಕ್ಕಿಯ ಅರಸ ಹೇಳಿದ ಮಾತು
ಉತ್ತಮ ಮಾರ್ಗವ ಹಿಡಿಯೋ ತಮ್ಮ
ಮಾರ್ಗವ ಕಟ್ಟಿ ಸುಲಿಯುತಾರೆ
ಮಾರನೆಂಬುವ ಕಳ್ಳೈದಾನೆ
ಪುರಂದರನಾದರೂ ಬಿಡುವವನಲ್ಲ

ಗುರುವಿನ ಸಂಗತಿ ಹಿಡಿಯೋ ಅಣ್ಣ
ಕಿವಿಯೂ ಮೂಗೂ ನಾಲಿಗೆಯಪ್ಪ
ಒಂದೊಂದೂ ನಿನ್ನ ಕೊಂದಾವಣ್ಣ
ಕುರಂಗ ಮಾತಂಗ ಪತಂಗ ಕೇಳು
ಭೃಂಗ ಮೀನವು ಹತವಾಯ್ತಣ್ಣ

ಜ್ಞಾನ ಭಕ್ತಿಗಳೆಂಬ ಎರಡು
ಮಾರ್ಗಗಳು ಬರುವ ತನಕ
ಎರಡೂ ಮನೆಯೊಳಿರಬೇಕಣ್ಣ
ದಾನದ ಕೈ ತೋರಿಸಬೇಕಪ್ಪ
ಅದರಿಂದ ಭವ ನದಿ ದಾಟಣ್ಣ
ನಿನ್ನ ಯೋಗ್ಯತೆ ತಿಳಿದ ಮೇಲೆ
ಪುರಂದರ ವಿಠ್ಠಲ ಸ್ಥಳ ಕೊಟ್ಟಾನು

ಒಂದೇ ಹಕ್ಕಿ ಹಣ್ ತಿಂತೈತೆ
ಮತ್ತೊಂದ್ಹಕ್ಕಿ ನೋಡುತದಪ್ಪ
ಹಣ್ ತಿಂದ್ಹಕ್ಕಿ ಬಡವಾಗೈತೆ
ತಿನ್ನದ ಹಕ್ಕಿ ಬಲಿತೈತಣ್ಣ
ಸುಳ್ಳಲ್ಲ ನೀ ಕೇಳೋ ತಮ್ಮ
ದ್ವಾಸುಪರ್ಣದ ಶ್ರುತಿಯಲ್ಲೈತೆ

ಒಂದೇ ಕುಲದ ಹಕ್ಯಲ್ಲಣ್ಣ
ಒಂದೇ ಕುಲವೆಂದು ತಿಳಿಯಲಿ ಬೇಡ
ತಿಳಿದರೆ ನಿಮಗೆ ಕೇಡಾದೀತು
ಹಳೇ ವಸ್ತ್ರವ ಬಿಸಾಡಣ್ಣ
ಹೊಸ ವಸ್ತ್ರ ನಿಮಗೆ ದೇವರು ಕೊಟ್ಟಾನು
ಹಕ್ಕಿಯರಸ ಆಡಿದ ಮಾತು
ಉತ್ತಮ ಮಾರ್ಗವ ಹಿಡಿಯೊ ತಮ್ಮ
ಮಾರ್ಗವ ಕಟ್ಟಿ ಸುಲಿಯುತ್ತಾರೆ

ಗಿರಿ ದುರ್ಗಗಳು ಐದಾವಪ್ಪ
ಮಾರನೆಂಬುವ ಕಳ್ಳೈದಾನೆ
ಸಮೀರಾನಾದರೆ ಹೊರಟ್ ಹೋಗ್ತಾನೆ
ಪುರಂದರನಾದರೆ ಬಿಡುವೊನಲ್ಲ
ಸುರ ಜ್ಯೇಷ್ಠನ ಸಂಗತಿ ಹಿಡಿಯೋ
ಕಣ್ಣು ಮೂಗು ಕಿವಿ ನಾಲಿಗೆಯಪ್ಪ
ಒಂದೊಂದೊಬ್ಬರ ಕೊಂದಾದವಣ್ಣ
ಕುರಂಗ ಮಾತಂಗ ಪತಂಗ ಕೇಳೊ
ಭೃಂಗ ಮೀನಾ ಹತವಾದವಣ್ಣ

ಜ್ಞಾನ ಭಕ್ತಿಯೆಂಬ ಮಾರ್ಗವು ಎರಡು
ದೊಡ್ಡ ಮಾರ್ಗವ ಹಿಡಿಬೇಕಣ್ಣ
ದೊಡ್ಡ ಸಂಗತಿ ಬರುವೊ ತನಕ
ಎರಡೂ ಮನೆಯಲ್ಲಿರಬೇಕಣ್ಣ
ದಾನದ ಕೈಯ ತೋರಿಸಬೇಕು
ಅದರಿಂದ ನದಿಯ ದಾಟುತಿಯಪ್ಪ
ನಿನ್ನ ಯೋಗ್ಯತೆ ತಿಳಿದ ಮೇಲೆ
ಪುರಂದರ ವಿಠ್ಠಲ ಸ್ಥಳ ಕೊಟ್ಟಾನು

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದನ್ನು ಬೀದಿಯಲ್ಲಿ ಕಣಿ ಹೇಳುತ್ತ ಬರುವ ಬುಡಬುಡಿಕೆಯವರ ಹಾಡಿನ ಧಾಟಿಯಲ್ಲಿ ರಚಿಸಿದ್ದಾರೆ. ಇಲ್ಲಿ 'ಶುಕ'ವೆಂದರೆ ಹಕ್ಕಿಯೂ ಆಯಿತು, ಭಾಗವತವನ್ನು ಹೇಳಿದ ಶುಕಮುನಿಯೂ ಆಯಿತು.

**ಜಗವೆಂಬೊ ಗಿಡ...** – ಸಂಸಾರ ವೃಕ್ಷದ ಚಿತ್ರ. ಅಥರ್ವಣ ಉಪನಿಷತ್ತಿನ 'ದ್ವಾಸುಪರ್ಣಾ' ಎಂಬ ಶ್ರುತಿಯ ಆಧಾರದಿಂದ ಈ ರೂಪಕವನ್ನು ಚಿತ್ರಿಸಿದ್ದಾರೆ. ಎರಡು ಹಣ್ಣುಗಳು ಈಶ, ಜೀವ; ಮೂರು ಬುಡ ತ್ರಿಗುಣ (ಸತ್ತ್ವ, ರಜಸ್ಸು, ತಮಸ್ಸು); ನಾಲ್ಕು ರಸ ಜೀವಾಭಿಮುಖನಾದ ಈಶನ ಗುಣಗಳು, ಪ್ರೇರಕ, ನಿಯಾಮಕ, ಸಾಕ್ಷಿಕ, ಉದ್ಧಾರಕ; ಐದು ಹರೆ ಪಂಚೇಂದ್ರಿಯಗಳು; ಆರು ಸ್ವರೂಪ ಅರಿಷಡ್ವರ್ಗ; ಏಳು ತೊಗಟೆ ಸಪ್ತವ್ಯಸನ; ಎಂಟು ಗರಿ (ಅಷ್ಟಪ್ರಕೃತಿ); ಅಕ್ಷ ಒಂಭತ್ತು (ನವಾವರಣ, ಅವ್ಯಕ್ತ ಇತ್ಯಾದಿ); ಹತ್ತು ಎಲೆ ದಶೇಂದ್ರಿಯ ವೃತ್ತಿಗಳು. ಹಣ್ಣು ತಿನ್ನುವ ಹಕ್ಕಿ ಜೀವ; ನೋಡುತ್ತಿರುವ ಹಕ್ಕಿ ಈಶ ('ಅಭಿಚಾಕಶೀತಿ') ಎರಡೂ ಒಂದೇ ಕುಲವಲ್ಲ; ಈಶ ಸ್ವತಂತ್ರ, ಜೀವ ಅಸ್ವತಂತ್ರ. ಜೀವವನ್ನು ಸ್ವತಂತ್ರವೆಂದು ಬಗೆದರೆ ಕೆಡುಕು ('ಘಾತಯಂತಿ  ಹಿ ರಾಜಾನಃ ರಾಜಾಹಮಿತಿ ವದಂತಂ').

**ಹಳೆ ವಸ್ತ್ರವ ಬಿಸಾಡು...** – ಭಗವದ್ಗೀತೆಯ 'ವಾಸಾಂಸಿ  ಜೀರ್ಣಾನಿ ಯಥಾ ವಿಹಾಯ' ಎಂಬ ಶ್ಲೋಕದ ಆಧಾರ. ವಸ್ತ್ರವೆಂದರೆ ದೇಹ. ಜನ್ಮ.

**ಹಕ್ಕಿಯ ರಸ** – ಈಶ, ಜೀವನಿಗೆ ಒಡೆಯ.

**ಗಿರಿ ದುರ್ಗಗಳು ಐದು** – ಐದು ಇಂದ್ರಿಯ ವಿಷಯ ಸುಖಗಳು.

**ಮಾರ** – ಮನ್ಮಥ, ಕಾಮ; ಬಯಕೆಗಳು.

**ಸಮೀರ** – ಹನುಮಂತ, ಬಲಶಾಲಿ; ಮುಕ್ತಿಯ ಅಪೇಕ್ಷೆ.

**ಪುರಂದರ** – ಇಂದ್ರ; ಸ್ವರ್ಗದ ಅಪೇಕ್ಷೆ.

**ಕುರಂಗ ಮಾತಂಗ...** – ಜಿಂಕೆಯು (ಕುರಂಗ) ಶಬ್ದಕ್ಕೆ (ಬೇಟೆಗಾರನ ಇಂಪಾದ ಬಿಲ್ಲ ಝೇಂಕಾರಕ್ಕೆ), ಆನೆಯು (ಮಾತಂಗ) ಘ್ರಾಣಕ್ಕೆ, ಪತಂಗವು ರೂಪಕ್ಕೆ (ಬೆಂಕಿಯ ಬೆಳಕಿಗೆ), ದುಂಬಿಯು (ಭೃಂಗ) ಹೂವಿನ ರಸಕ್ಕೆ, ಮೀನು ಸ್ಪರ್ಶಕ್ಕೆ (ಗಾಳಕ್ಕೆ ಸಿಲುಕಿದ ಹುಳಕ್ಕೆ) ಮರುಳಾಗಿ ಪ್ರಾಣಬಿಡುತ್ತವೆ ಎಂಬ ಸುಭಾಷಿತ ಶ್ಲೋಕ.

**ಸ್ಥಳ ಕೊಟ್ಟಾನು** – ವೈಕುಂಠದಲ್ಲಿ, ಮುಕ್ತರ ಪದವಿಯಲ್ಲಿ.

**Classification:** Mundige

**Ankita:** purandara vittala

**Location:** NA

**Category:** Jeevanoddhara, Nama Mahatme, buDubuDuke Song, jOgi pada

**Sub-Category:** mane, mana, anumana, pakshi, loka, hannu, sullu, shruti, vastra, deva, arasa, dAri, parvata, Vishnu, Krishna, kannu, kai, kivi, kalla, jnana, dAna, nadi, Valmiki, Vibhishana, amruta, vajra, hanuma, satya, shiva, chitta, sittu, Narasimha, ambarisha, Dhruva, ajamila, prahallada, uddhava, gaja, samsara, deha, mukti, huttu,

**Pravachana:** Vid. Kallapur Pavamanachar

**Explanation:** NA